ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1567
ಸದಸ್ಯರ ಹೆಸರು	:	ಶ್ರೀ ವಿಜಯ ಸಿಂಗ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ	:	24-09-2021
ಉತ್ತರಿಸುವ ಸಚಿವರು	:	ಮಾನ್ಯ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು

ಕ್ರ ಸಂ.	ಪ್ರಶ್ನೆ	ಉತ್ತರ
ಅ)	ಡಾ: ಡಿ.ಎಂ.ನಂಜುಂಡಪ್ಪನವರ ವರದಿ ಅನುಷ್ಠಾನ ಅವಧಿ ಮುಗಿದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಡಾ: ಡಿ.ಎಂ.ನಂಜುಂಡಪ್ಪನವರ ವರದಿ ಅನುಷ್ಠಾನದಿಂದ ರಾಜ್ಯದಲ್ಲಿ ಆಗಿರುವ ಪ್ರಾದೇಶಿಕ ಅಸಮಾನತೆಯ ಬದಲಾವಣೆಗಳೇನು;	"ಹೌದು ಬಂದಿದೆ" ವರದಿ ಪರಿಶೀಲನೆಯಲ್ಲಿದೆ
ಆ)	ಡಾ: ಡಿ.ಎಂ.ನಂಜುಂಡಪ್ಪನವರ ವರದಿ ಅನುಷ್ಠಾನದಿಂದ ರಾಜ್ಯದಲ್ಲಿ ಪ್ರಾದೇಶಿಕ ಅಸಮಾನತೆ ಸರಿದೂಗಿಸಲಾಗಿದೆಯೇ; ಪ್ರಾದೇಶಿಕ ಅಸಮಾನತೆ ಸರಿದೂಗಿಸದಿದ್ದಲ್ಲಿ ಸರ್ಕಾರ ಡಾ: ಡಿ.ಎಂ.ನಂಜುಂಡಪ್ಪನವರ ವರದಿ ಅನುಷ್ಠಾನವನ್ನು ಮುಂದುವರಿಸಲು ಕೈಗೊಂಡಿರುವ ಕ್ರಮವೇನು;	ಡಾ.ಡಿ.ಎಂ.ನಂಜುಂಡಪ್ಪನವರ ವರದಿಯ ಪ್ರಕಾರ 2007-08ರಲ್ಲಿ 8 ವರ್ಷಗಳ ಕಾಲಮಿತಿಯಲ್ಲಿ ಸಮತೋಲನೆಯನ್ನು ತರಲು ಉದ್ದೇಶಿಸಲಾಗಿತ್ತು. ಆದರೆ 2014-15ರಲ್ಲಿ ಕಾಲಾವಧಿಯು ಮುಗಿದ ಕಾರಣ ಬೆಳಗಾವಿ ಅಧಿವೇಶನದಲ್ಲಿ ದಿನಾಂಕ:15.07.2015ರಂದು ಮತ್ತೊಮ್ಮೆ ನಿರ್ಣಯ ಕೈಗೊಂಡು 2019-20ನೇ ಸಾಲಿನವರೆವಿಗೆ ಮತ್ತೆ 5 ವರ್ಷಗಳವರೆಗೆ ಮುಂದುವರಿಸಲಾಯಿತು. ಪ್ರತಿ ವರ್ಷ ಆಯವ್ಯಯದಲ್ಲಿ ರೂ.3000 ಕೋಟಿಗಳನ್ನು ನಿಗಧಿಪಡಿಸಿ ಪ್ರಾದೇಶಿಕ ಅಸಮತೋಲನವನ್ನು ನಿವಾರಣೆ ಮಾಡಲು ಇಲಾಖಾವಾರು ಯೋಜನೆಗಳನ್ನು ರೂಪಿಸಿ, ಬೇಡಿಕೆಯನ್ನಾಧರಿಸಿ ವಿಶೇಷ ಅಭಿವೃದ್ಧಿ ಯೋಜನೆಯ ಕಾರ್ಯಕ್ರಮಗಳನ್ನು ಜಾರಿಮಾಡಲಾಗುತ್ತಿದೆ. ಈಗಾಗಲೇ ಸದರಿ ಕಾರ್ಯಕ್ರಮದ ಅವಧಿ ಮುಗಿದಿದ್ದರಿಂದ, NITI ಆಯೋಗ ಸೂಚಿಸಿದ ಹೊಸ ಸೂಚ್ಯಾಂಕಗಳನ್ನು ಆಧರಿಸಿ ತ್ವರಿತ ಗತಿಯಿಂದ ಪ್ರಾದೇಶಿಕ ಅಸಮತೋಲನೆಯನ್ನು ನಿವಾರಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.
ಇ)	ಡಾ: ಡಿ.ಎಂ.ನಂಜುಂಡಪ್ಪನವರ ವರದಿಯಂತೆ ರಾಜ್ಯದಲ್ಲಿ ವರದಿ ಅನುಷ್ಠಾನದಿಂದ ಎಷ್ಟು ಹಿಂದುಳಿದ ತಾಲ್ಲೂಕುಗಳು ಅಭಿವೃದ್ಧಿ ಹೊಂದಿದ ತಾಲ್ಲೂಕುಗಳಾಗಿ ಬದಲಾವಣೆಯಾಗಿವೆ; ವಿವರಿಸುವುದು;	ವರದಿ ಪರಿಶೀಲನೆಯಲ್ಲಿ ಇದೆ
ಈ)	ಡಾ: ಡಿ.ಎಂ.ನಂಜುಂಡಪ್ಪನವರ ಉನ್ನತಾಧಿಕಾರ ಸಮಿತಿಯ ರೀತಿ ಮತ್ತೊಮ್ಮೆ ಪ್ರಾದೇಶಿಕ ಅಸಮಾನತೆ ಅಧ್ಯಯನ ಮಾಡಲು	"ಇಲ್ಲ" ಈಗಾಗಲೇ ಸದರಿ ಕಾರ್ಯಕ್ರಮದ ಅವಧಿ ಮುಗಿದಿದ್ದರಿಂದ, NITI ಆಯೋಗ ಸೂಚಿಸಿದ ಹೊಸ ಸೂಚ್ಯಾಂಕಗಳನ್ನು ಆಧರಿಸಿ ತ್ವರಿತ

ಕ್ರ ಸಂ.	ಪ್ರಶ್ನೆ	ಉತ್ತರ
	ಉನ್ನತಾಧಿಕಾರ ಸಮಿತಿ ರಚಿಸಲು ಸರ್ಕಾರ ಯೋಚಿಸಿದೆಯೇ; ಮತ್ತೊಂದು ಸಮಿತಿ ರಚಿಸಲು ಸರಕಾರಕ್ಕೆ ಇರುವ ತೊಡಕುಗಳೇನು;	ಗತಿಯಿಂದ ಪ್ರಾದೇಶಿಕ ಅಸಮತೋಲನೆಯನ್ನು ನಿವಾರಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಪಿಡಿಎಸ್ 53 ಎಸ್‌ಡಿಪಿ 2021

(ಮುನಿರತ್ನ)
ಸಚಿವರು,
ಯೋಜನೆ, ಕಾರ್ಯಕ್ರಮ ಸಂಯೋಜನೆ
ಮತ್ತು ಸಾಂಖ್ಯಿಕ ಇಲಾಖೆ.